ಪಲ್ಲಟವಾಗುತ್ತವೆ. ದೀರ್ಘಕಾಲ ಜಾರಿಯಲ್ಲಿದ್ದ ಬಹುವಚನದ ಸಂಬಂಧವೊಂದು ವ್ಯಕ್ತಿಗಳಿಬ್ಬರ ನಡುವಣ ಅನ್ಯೋನತೆಯಿಂದಾಗಿ ಏಕವಚನವಾಗುವಂತೆ ಇನ್ನೂ ಕೆಲವು ಸಂದರ್ಭಗಳಲ್ಲಿ ಇದು ವೈರುಧ್ಯಕ್ಕೆ ತಿರುಗುವುದನ್ನು ಕಾಣುತ್ತೇವೆ. ಮೊದಲು ಏಕವಚನದಲ್ಲಿದ್ದ ಅನನ್ಯ ಸಂಬಂಧವೊಂದು ಕಾಲಾಂತರದಲ್ಲಿ ಬಹುವಚನಕ್ಕೆ ತಿರುಗುವ ಅಪರಿಚಿತತೆಯನ್ನುಂಟು ಮಾಡುವ ವಿರುದ್ಧ ಚಲನೆ ಇದು. ಇದಕ್ಕೆ ನಾವು ಕೆಲವು ತಂದೆ ಮಕ್ಕಳ ಸಂಬಂಧವನ್ನು ನೋಡಬಹುದು. ಚಿಕ್ಕವರಿದ್ದಾಗ ಓಡಿಬಂದು 'ಅಪ್ಪಾ', 'ಪಪ್ಪಾ' ಎಂದು ತಬ್ಬಿಕೊಳ್ಳುತ್ತಿದ್ದ ಮಕ್ಕಳು ಬೆಳೆಯುತ್ತ ಪ್ರೌಢರಾದಂತೆ 'ಅಪ್ಪಾಜೀ' ಎಂದು ಗೌರವಪೂರ್ವಕವಾಗಿ ಬಹುವಚನದಲ್ಲಿ ಕರೆಯತೊಡಗುತ್ತಾರೆ. ಇಲ್ಲಿ ಒಂದು ಬಗೆಯ ಅಂತರ ಬೆಳೆದು ಬಿಟ್ಟಿರುತ್ತದೆ. ಬಾಲ್ಯದಲ್ಲಿ ಅನ್ಯೋನ್ಯವಾಗಿದ್ದ ತಂದೆ-ತಾಯಿ ಮತ್ತು ಮಕ್ಕಳ ಸಂಬಂಧವು ಮಕ್ಕಳು ಬೆಳೆದಂತೆಲ್ಲ ಅಸಡ್ಡೆಯ ಸಂಬಂಧವೂ ಆಗುತ್ತದೆ. ಆಗೆಲ್ಲ ಮಕ್ಕಳು 'ಅಡ್ನಾಡಿ ವಚನ' ಪ್ರಯೋಗಿಸಲು ಮುಂದಾಗುತ್ತಾರೆ. ಹರೆಯದ ಮಗನಿಗೆ ತಾಯಿಯೊಬ್ಬಳು ಯಾವುದೋ ಒಂದು ಕೆಲಸಕ್ಕಾಗಿ ಕರೆದರೆ ಅವನ ಮಾತು ಹೇಗಿರುತ್ತದೆ ನೋಡಿ:

'ಏನು...?'


'ಅಂಗಡಿಗೆ ಹೋಗಿ ಬಾರ... ಯಪ್ಪಾ...'

'ಎದಕ್ಕ..?'

'ಒಂದ್ ಕೆಜಿ ಹಿಟ್ಟು ತರಬೇಕು.'

'ನನ್ನ ಕಡೀಂದ ಆಗಂಗಿಲ್ಲ, ನೀನ ಬೇಕಾದ್ರ ಹೋಗು, ಸಾಕಾದ್ರ ಬಿಡು .'

ಇದು ಬರೀ ಏಕವಚನವಲ್ಲ, ಹೇಳಿದೆನಲ್ಲ 'ಅಡ್ನಾಡಿ ವಚನ' ಅಂತ! ಇದನ್ನು ಸ್ವತಃ ಕಿವಿಯಾರೆ ಕೇಳಬೇಕು. ಅಂದಾಗ ಆ ಧ್ವನಿಯಲ್ಲಿರುವ ಅಸಡ್ಡಾಳತನ, ತಾತ್ಸಾರ ಅರ್ಥವಾಗುತ್ತದೆ. ತಂದೆ ತಾಯಿಗಳು ಬಹಳಷ್ಟು ಸಂದರ್ಭದಲ್ಲಿ ತಮ್ಮ ಮಕ್ಕಳಿಂದ ಹೆಚ್ಚೇನೂ ನಿರೀಕ್ಷಿಸುವುದಿಲ್ಲ. ಅವರು ತಮ್ಮನ್ನು ಬಾಯ್ತುಂಬ 'ಅವ್ವ...', 'ಅಪ್ಪ...' ಅಂತ ಕರೆದರೆ ಸಾಕು ಅಂದುಕೊಳ್ಳುತ್ತಿರುತ್ತಾರೆ. ಆದರೆ ಈಗಿನ ಮಕ್ಕಳು ನೋಡಿದರೆ ಅವ್ವನಿಗೆ 'ಅವ್ವ' ಅನ್ನಲು, ಅಪ್ಪನಿಗೆ 'ಅಪ್ಪ' ಅನ್ನಲು ಹಿಂದೇಟು ಹಾಕುವಂತವರು. ಪ್ರೀತಿಯಿಂದ ಅಕ್ಕರೆಯಿಂದ ಮಾತನಾಡಿಸುವ ತಾಯಿಗೆ ಬೇಕಾಬಿಟ್ಟಿ ಮಾತನಾಡುವ ಮಕ್ಕಳಲ್ಲಿ ಹುಡುಗರೇ ಜಾಸ್ತಿ. ಮತ್ತೆ ಇದು ಪುರುಷ ಪಾರುಪತ್ಯದ ಲಕ್ಷಣವೇ ಆಗಿದೆ.



ಮೇಲ್ಜಾತಿಯವರು, ಮೇಲಧಿಕಾರಿಗಳು, ಶ್ರೀಮಂತರು ಮತ್ತು ಬಲಾಢ್ಯರೆಲ್ಲರೂ ಕ್ರಮವಾಗಿ ಕೆಳವರ್ಗದವರನ್ನು, ಕೈಕೆಳಗಿನ ನೌಕರರನ್ನು, ಬಡವರನ್ನು ಮತ್ತು ದುರ್ಬಲರನ್ನು ಏಕವಚನದಿಂದಲೇ ಕರೆಯುತ್ತಾರೆ. ದೊಡ್ಡವರು-ಸಣ್ಣವರು ಎಂಬುದಕ್ಕೆ ಇಲ್ಲಿ ವಯಸ್ಸು, ಅನುಭವ, ಮನುಷ್ಯತ್ವ ಅಳತೆಗೋಲಾಗುವುದಿಲ್ಲ. ಅಂತಸ್ತು, ಅಧಿಕಾರ, ಜಾತಿ, ಮತ್ತು ಶಕ್ತಿಬಲಗಳು ಬಹುದೊಡ್ಡವು ಆಗಿ ಎದುರಿನವರನ್ನು ಏಕವಚನ ಮತ್ತು ಅದಕ್ಕಿಂತಲೂ ನಿಕೃಷ್ಟವಾಗಿ ಕಾಣುವುದುಂಟು.

ಇನ್ನು ಕೆಲವರು ಬಳಸುತ್ತಿರುವುದು ಏಕವಚನವೋ ಬಹುವಚನವೋ ಅಂತ ಬೇಗ ಗುರುತಿಸಲಾಗದ ವಚನಶೈಲಿಯೊಂದು ಹೆಚ್ಚೆಚ್ಚು ಪ್ರಚಲಿತವಾಗುತ್ತಿದೆ.

'ನೋಡಿ, ನಾನು ಹೇಳ್ತಾ ಇದ್ದೀನಿ ಕೇಳಿ.'

'ಕರೆಟ್ಟಾಗಿ ತಿಳ್ಕಳಿ ಫಸ್ಟು...'

'ಇಲ್ಲ, ಇಲ್ಲ. ಅದೆಲ್ಲ ಆಗಲ್ಲ... ಇಲ್ಲಿ ಕೇಳಿ... ತಿರುಗಾ ನಾನು ಮೊದ್ಲಿಂದ ಹೇಳಕ್ಕಾಗಲ್ಲ ಆಮೇಲೆ...'

ಬೆಂಗಳೂರು ಪ್ರಣೀತ ಇಂಥ ಭಾಷೆ ಎಲ್ಲೆಡೆ ನಿಧಾನಕ್ಕೆ ಪಸರಿಸುತ್ತಿದೆ. ನಾಡಿನ ಎಲ್ಲ ರಸ್ತೆಗಳು ಬೆಂಗಳೂರಿಗೆ ಸೇರಿ, ಮತ್ತೆ ಮರಳಿ ಹಳ್ಳಿಯತ್ತಲೂ ಹರಿದಿರುವುದರಿಂದ ಈ ಭಾಷೆ ಕೂಡಾ ಹಾಗೆಯೇ ಸಾಗುತ್ತಲಿದೆ. ಇದು ಮುಂದುವರೆದರೆ ನಮ್ಮ ಹಲವು ನಮೂನೆಯ ಪ್ರಾದೇಶಿಕ ಸೊಗಡಿನ ವಚನ ಶೈಲಿ ಸಾಯುತ್ತದಲ್ಲ ಎಂಬುದು ನನ್ನ ಆತಂಕ.

●